**<u>ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಬೀದರ.</u>**

**<u>ದಿನಾಂಕಃ 11-08-2026 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ. ಎಂ.ಡಿ.ಎಸ್ ವಕೀಲರಿಂದಃ</u>**

ನನ್ನ ಸಾಕ್ಷಿ ವಿಚಾರಣೆ, ಹೇಳಿಕೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯ ಎಲ್ಲಾ ಸತ್ಯವಾಗಿರುತ್ತದೆ.

| | |
|---|---|
| ನಿ.ಆರ್.1 | ಅಧಿಕಾರ ಪತ್ರ |
| ನಿ.ಆರ್.2 | ಪಾಲಿಸಿ. |

ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲುಃ ಅರ್ಜಿದಾರರ ಪರ: ಶ್ರೀ : ಪಿ.ಟಿ ವಕೀಲರರಿಂದ.</u>**

ಅಪಘಾತ ಸಮಯದಲ್ಲಿ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ಸಾಕ್ಷಿಯು ನಮ್ಮ ವಿಮೆ ಕಂಪನಿ ದಾಖಲೆಯ ಆಧಾರದ ಮೇಲೆ ಇರುತ್ತದೆ ಎಂದರೆ ಸರಿಯಲ್ಲ. ಪಾಲಿಸಿ ಷರತ್ತುಗಳು ಉಲ್ಲಂಘನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. 2 ವಾಹನದಿಂದ ಅಪಘಾತ ಆಗಿರುತ್ತದೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಇದೇ ದಿನ ಸಾಕ್ಷಿ ಪ್ರಮಾಣ ಪತ್ರದಲ್ಲಿ 2 ವಾಹನದಿಂದ ಅಪಘಾತ ಆಗಿರುತ್ತದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ದೋಷಾರೂಪಣಾ ಪಟ್ಟಿಯಲ್ಲಿ ಎರಡು ವಾಹನದಿಂದ ಅಪಘಾತ ಆಗಿರುತ್ತದೆ ಎಂದು

ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಭಾತ್ಯತೆ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿಯು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇರುವುದಿಲ್ಲ).**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

**(ಓ.ಹೇ.ಕೇ.ಸ.ಇದೆ.)**

**sd/-**

**ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್. ಸಿ ಬೀದರ.**